ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ



## ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ
## ಹಾಗೂ
## 'ದರ್ಪಣ' ವಾರ್ಷಿಕ ಸಂಚಿಕೆ ಬಿಡುಗಡೆ

* 12 ಮೇ 2026 * ಮಂಗಳವಾರ * ಬೆಳಗ್ಗೆ 10.30

ದಿವ್ಯಾಶೀರ್ವಾದ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಅಧ್ಯಕ್ಷತೆ

**ಶ್ರೀ ಕೆ.ಇ. ರಘು. ಕೆ ಎ ಎಸ್**

ಕಾರ್ಯದರ್ಶಿಗಳು

ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮಲೆ ಮಹದೇಶ್ವರ ಬೆಟ್ಟ

ಸಮಾರೋಪ ಭಾಷಣ

**ಕು. ಚೈತ್ರ**

ಅಂತರಾಷ್ಟ್ರೀಯ ಖೋ ಖೋ ಕ್ರೀಡಾ ಪಟು,

ಕುರುಬೂರು

'ದರ್ಪಣ' ವಾರ್ಷಿಕ ಸಂಚಿಕೆ ಬಿಡುಗಡೆ

**ಕು. ಗಾನವಿ**

ಪ್ರಥಮ ರನ್ನರ್‌ಅಪ್

ಹಳ್ಳಿಪವರ್ ರಿಯಾಲಿಟಿ ಶೋ

ಜೀಪವರ್ ಕನ್ನಡ ವಾಹಿನಿ

ಉಪಸ್ಥಿತರು

**ಡಾ. ಹೆಚ್.ಎಸ್. ಕೊಂಗಳಪ್ಪ**

ಪ್ರಾಂಶುಪಾಲರು

**ತಮಗೆ ಪ್ರೀತಿ ಪೂರ್ವಕ ಸ್ವಾಗತ**

ಸಂಚಾಲಕರು, ಬೋಧನಾಂಗ, ಕಾರ್ಯಾಂಗ ಮತ್ತು ವಿದ್ಯಾರ್ಥಿವೃಂದ

ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ B+ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 jsscwk@gmail.com www. jsscwkgl.org

**"ಸಾಂಸ್ಕೃತಿಕ & ಕ್ರೀಡಾ ವೇದಿಕೆಗಳು ಸಮಾರೋಪ ಹಾಗೂ 'ದರ್ಪಣ' ವಾರ್ಷಿಕ ಸಂಚಿಕೆ ಬಿಡುಗಡೆ"**

**ಸತತ ಪ್ರಯತ್ನದಿಂದಲೇ ಯಶಸ್ಸು ಸಾಧ್ಯ – ಕು.ಚೈತ್ರ**

ದಿನಾಂಕ:12.5.2026 ರಂದು ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 2025-26ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಹಾಗೂ 'ದರ್ಪಣ' ವಾರ್ಷಿಕ ಸಂಚಿಕೆ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಅಂತರಾಷ್ಟ್ರೀಯ ಖೋಖೋ ಕ್ರೀಡಾಪಟು ಕುರುಬೂರಿನ ಕು. ಚೈತ್ರರವರು 'ದರ್ಪಣ ವಾರ್ಷಿಕ ಸಂಚಿಕೆ ಬಿಡುಗಡೆ ಮಾಡಿದರು. ಸಮಾರೋಪ ಭಾಷಣದಲ್ಲಿ ನಾಲ್ಕನೇ ತರಗತಿಯಿಂದ ನನ್ನ ಕ್ರೀಡಾ ಚಟುವಟಿಕೆಗಳು ಪ್ರಾರಂಭವಾಗಿದ್ದವು. ನನ್ನ ಕ್ರೀಡಾ ಸಾಧನೆಗೆ ತಂದೆ-ತಾಯಿ, ಗುರುಗಳು ಕಾರಣರಾಗಿದ್ದಾರೆ. ಕ್ರೀಡಾ ಚಟುವಟಿಕೆಗಳು ಜೀವನಕ್ಕೆ ಅತ್ಯವಶ್ಯಕ. ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಬಹುದು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮುಖ್ಯ. ನೀವು ಪಡೆದ ಬಹುಮಾನ ಕೇವಲ ಬಹುಮಾನವಲ್ಲ ಅದು ನಿಮ್ಮ ಮುಂದಿನ ಭವಿಷ್ಯಕ್ಕೆ ಪ್ರೇರಣೆಯಾಗಲಿದೆ. ನಿಮ್ಮ ಈ ಸಾಧನೆ ನಿರಂತರವಾಗಿರಲಿ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯರಾದ ಡಾ. ಹೆಚ್. ಎಚ್ ಕೊಂಗಳಪ್ಪನವರು ಸಾಂಸ್ಕತಿಕ ಹಬ್ಬದ ಕೊನೆ ಘಟ್ಟದಲ್ಲಿದ್ದೇವೆ. ಕಲೆ & ಸಂಸ್ಕೃತಿ ಕೇವಲ ಮನರಂಜನೆಗೆ ಮಾತ್ರವಲ್ಲ, ಅವು ನಿಮ್ಮ ವ್ಯಕ್ತಿತ್ವ ವಿಕಸನಕ್ಕೆ ಬುನಾದಿಯಾಗಿವೆ. ಜೀವನದಲ್ಲಿ ಗುರಿ ದೃಢವಾಗಿರವುದರ ಜೊತೆಗೆ ಭಾಷಾ ಜ್ಞಾನ ಇರಬೇಕು, ಕ್ರೀಡೆ & ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಸಹಕಾರಿಯಾಗಿವೆ. ನಿಮ್ಮ ಕಲೆಯ ಹಸಿವು ಎಂದಿಗೂ ಮುಕ್ತಾಯವಾಗಬಾರದು. ಮುಂದೆ ಗುರಿ ಇದ್ದು ಹಿಂದೆ ಗುರು ಇದ್ದರೆ ಯಶಸ್ಸು ಸಾಧ್ಯ ಎಂದು ತಿಳಿಸಿದರು.

ವೇದಿಕೆಯಲ್ಲಿ ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಶ್ರೀಮತಿ ಎಸ್ ಮಮತ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಸ್ ಶ್ರೀಧರ್ ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ನಂತರ ವಿದ್ಯಾರ್ಥಿನಿಯರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಅಂತರಾಷ್ಟ್ರೀಯ ಖೋಖೋ ಕ್ರೀಡಾಪಟು ಕು.ಚೈತ್ರರವರು ಸಮಾರೋಪ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಸ್ ಶ್ರೀಧರ್, ಪ್ರಾಚಾರ್ಯರಾದ ಡಾ.ಹೆಚ್.ಎಚ್ ಕೊಂಗಳಪ್ಪನವರು ಹಾಗೂ ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಶ್ರೀಮತಿ ಎಸ್ ಮಮತರವರನ್ನು ಕಾಣಬಹುದು.



2025-26ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ 'ದರ್ಪಣ' ವಾರ್ಷಿಕ ಸಂಚಿಕೆ ಬಿಡುಗಡೆ ಮಾಡುತ್ತಿರುವುದು. ಚಿತ್ರದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಸ್ ಶ್ರೀಧರ್, ಅಂತರಾಷ್ಟ್ರೀಯ ಖೋಖೋ ಕ್ರೀಡಾಪಟು ಕು. ಚೈತ್ರರವರು, ಪ್ರಾಚಾರ್ಯರಾದ ಡಾ. ಹೆಚ್. ಎಚ್ ಕೊಂಗಳಪ್ಪ ನವರು ಹಾಗೂ ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಶ್ರೀಮತಿ ಎಸ್ ಮಮತರವರನ್ನು ಕಾಣಬಹುದು.



